# ಮದುವೆ ಉಡುಗೆಯ ರೈಲು



ಜಗತ್ತಿನಲ್ಲಿ ಇಷ್ಟುದ್ದವಾದ ಮದುವೆ ಉಡುಗೆ ಇರಲು ಸಾಧ್ಯವೇ? ಇಲ್ಲ ಎನ್ನುವಿರಾದರೆ ನೋಡಿ ಪ್ರತ್ಯಕ್ಷ ಸಾಕ್ಷಿ. ಬಿಳಿಯ ವರ್ಣದ ಈ ಗೌನು ಬರೋಬ್ಬರಿ ಎಂಟು ಕಿಲೋಮೀಟರ್‌ಗಿಂತಲೂ ಮುಂದೆ ಹಾಸಿಕೊಂಡು ಹೋಗಿದೆ. ಎವರೆಸ್ಟ್ ಪರ್ವತವನ್ನು ಇದರಿಂದ ಮೂರು ಸಲ ಅಳೆಯಬಹುದು. 'ಮದುವೆ ಉಡುಗೆಯ ರೈಲು' ಎಂದೇ ಹೆಸರಾದ ಈ ದಿರಿಸಿನ ಉದ್ದ ಎಷ್ಟು ಗೊತ್ತೇ? 26,559 ಅಡಿಗಳು.

ಗಿನ್ನೆಸ್ ದಾಖಲೆಗೆ ಸೇರಿಕೊಂಡಿರುವ ಈ ಉಡುಪು ಸಿದ್ಧವಾಗಿರುವುದು ಫ್ರಾನ್ಸ್ ದೇಶದ ಕಾಡ್ರಿ ಪಟ್ಟಣದಲ್ಲಿ. ಕಸೂತಿ ಕಲೆಗೆ ಹೆಸರಾದ ಇಲ್ಲಿ 2006ರಲ್ಲಿ ಇಂತಹ ಉಡುಪು ತಯಾರಿಸಿ ವಿಶ್ವದಾಖಲೆ ಮಾಡಲಾಗಿತ್ತು. ಆದರೆ 2015ರಲ್ಲಿ ಚೀನಾದೇಶ 15,354 ಅಡಿ ಉದ್ದದ ಉಡುಗೆ ತಯಾರಿಸಿ ಈ ದಾಖಲೆಯನ್ನು ಮುರಿದಿತ್ತು. ಇದೀಗ 2017ರ ಡಿಸೆಂಬರ್ ತಿಂಗಳಲ್ಲಿ ಮತ್ತೆ ಫ್ರಾನ್ಸ್ ಸ್ವಂತ ದಾಖಲೆಯನ್ನು ನಿರ್ಮಿಸಿದೆ.

ರೈಲು ಪಟ್ಟಿಯಂತೆ ದೀರ್ಘವಾಗಿರುವ ಸಾವಿರಾರು ಅಡಿ ಉದ್ದವಿರುವ ಈ ಬಟ್ಟೆಯ ಹಳಿಯನ್ನು ತಯಾರಿಸಲು ಹದಿನೈದು ಮಂದಿ ಮಹಿಳಾ ದರ್ಜಿಗಳು ಎರಡು ತಿಂಗಳು ಅವಿರತವಾಗಿ ದುಡಿದಿದ್ದಾರೆ. ದಾಖಲೆಗೆ ಸೇರಿದ ಬಳಿಕ ಈ ಪಟ್ಟಿಗಳನ್ನು ಕತ್ತರಿಸಿ ಹರಾಜು ಹಾಕಿದರು. ಬಂದ ಹಣವನ್ನು ಮಾನವ ಸೇವಾ ಸಂಸ್ಥೆಗಳಿಗೆ ದೇಣಿಗೆಯಾಗಿ ನೀಡಿದರು.

★ ಪ. ರಾಮಕೃಷ್ಣ ಶಾಸ್ತ್ರಿ

